ಆಶ್ಚರ್ಯಗೊಂಡರು. ಅವಳ ಸುತ್ತಲೂ ಸುತ್ತಿ ನಿಂತರು. ಧೈರ್ಯವನ್ನು ಹೀಗೆ ಹೇಳಿದರು: 'ದೇವಿ, ಪಾರ್ಥನನ್ನು ಹಿಮ್ಮೆಟ್ಟಿಸಿದ, ವೈರಿಯಲ್ಲಿ ಬೇಗೆಯನ್ನುಂಟುಮಾಡಿದ ಇಂತಹ ಮಗನನ್ನು ಪಡೆದ ನೀನು ಧನ್ಯೆ. ಪಕ್ಷಿಯು ಬಾಣದ ಹೊಡೆತಕ್ಕೆ ಗರಿಗಳನ್ನು ಉದುರಿಸುತ್ತ ಹೋಗುವಂತೆ ಹೆಜ್ಜೆ ಹೆಜ್ಜೆಗೆ ವೈರಿಸೇನೆ ಹಿಮ್ಮೆಟ್ಟುತ್ತಿದೆ. ದಿಂಡುರುಳಿ ಬೀಳುತ್ತಿರುವ ವೈರಿಸೇನೆ ಸಾವಿರ ಲಕ್ಷಕ್ಕಿಂತ ಹೆಚ್ಚಾಗಿದ್ದು, ಅವರು ಭಯಗೊಂಡು ಕೆಟ್ಟೋಡುತ್ತಿದ್ದಾರೆ. ರಾಣಿಯೆ, ನಿನಗೆ ಭೀತಿ ಬೇಡ. ನಿನ್ನ ಮಗನು ಮಣಿಪುರದ ಕೀರ್ತಿಗೆ ಕಳಸವಿಕ್ಕಿ ಬರುವನು!'

ಅದನ್ನು ಕೇಳುತ್ತಿದ್ದ ವೀರಸತಿಯ ಕಿವಿಗೆ ನುಡಿಯ ಚೂರಿಯಿಂದ ತಿರುಚಿದಂತಾಯಿತು. ಅವಳು ಆಳುಗಳಿಗೆ ತಡಮಾಡದೆ ಬೇಗ ಕುದುರೆಯನ್ನು ತನ್ನಿ ಎಂದು ಆಜ್ಞೆ ಮಾಡಿದಳು. ಅವರು ಬೆಳ್ಳನೆಯ ರಣ ಕುದುರೆಯನ್ನು ತಂದರು. ಶಾಂತಿಯನ್ನು ಸೂಚಿಸಲು ಶರತ್ಸಮಯ ಮುಗಿಲಿನಂತೆ ಬೆಳ್ಳಗೆ ಪ್ರಕಾಶಿಸುವ ಬಿಳಿಯ ಬಾವುಟವನ್ನು ಎಲ್ಲರೂ ಕಾಣುವಂತೆ ಎತ್ತಿಕೊಂಡಳು. ಜೊತೆಗೆ ಸಂಧಿಸೂಚಕ ಸುಸ್ವರದ ವೀರ ತೂರ್ಯವನ್ನು ಊದುತ್ತ, ಕುದುರೆಯ ಮೇಲೆ ನೆಗೆದು ಕುಳಿತು ಯುದ್ಧಭೂಮಿಯ ಕಡೆಗೆ ನಡೆದಳು. ಅವಳು ಕವಚಗಿವಚ, ಕತ್ತಿಗಿತ್ತಿಗಳೊಂದನ್ನು ಹೊಂದಿರಲಿಲ್ಲ. ಕೊರಳ ಜಪಮಣಿಮಾಲೆ, ಉಟ್ಟ ನಾರು ಬೆಳ್ಳನೆ ಸೀರೆಯಲ್ಲಿ ಶಾಂತಿ ಸಂಕೇತವಾಗಿ ನಡೆದಳು!

ಕೆಲವು ಸಖಿಯರು ಹಿಂಬಾಲಿಸಲು ಪ್ರಯತ್ನಿಸಿದರು, ಆದರೆ ಪ್ರಯೋಜನವೇನು? ಬಭ್ರುವಾಹನನ ತಾಯಿ, ಸಿತವಾಹನನ ಪತ್ನಿ, ಮಣಿಪುರದ ರಾಣಿ ಚಿತ್ರಾಂಗದೆ ನಿಮಿಷದಲ್ಲಿ ಮಿಂಚಿ ಮರೆಯಾಗಿ ಯುದ್ಧರಂಗವನ್ನು ಹೊಕ್ಕಳು.

ರುಂದ್ರ ರಣರಂಗದಲಿ, ನುಗ್ಗಿನಡೆದಳ್ ಚಿತ್ರೆ, ಬಿಳಿಯ ಬಾವುಟವಿಡಿದು, ತುತ್ತುರಿಯ ದನಿಗೈದು.

ಆ ರಣಭೂಮಿಯು ಯಮನ ನಿವಾಸದಂತೆ ಗೋಚರಿಸುತ್ತಿತ್ತು! ಅಲ್ಲಿ ರಕ್ತಾಗ್ನಿ ಹೊತ್ತಿದ್ದ ಸಹಸ್ರಾರು ದೀವಿಗೆಗಳ ಸೊಡರ್ಮಾಲೆಗಳು – ಕತ್ತಲ ಕಾಳಿಯ ನಾಲಗೆಯ ನರ್ತನವನ್ನು ಹೋಲುತ್ತ ರಂಜಿಸಿದವು. ಸಿಟ್ಟು ಹರಿಸಿದ ರಕ್ತದಿಂದ ತೊಪ್ಪನೆಯೆ ತೊಯ್ದ ಕೆಸರಿನಲ್ಲಿ, ಕಿವಿಗೆ ಕರ್ಕಶವಾದ ರಣದ ಭೀಷಣ ರುದ್ರ ಕೋಲಾಹಲವು ಸ್ನಾನ ಮಾಡಿದಂತಿತ್ತು. ಕಾಳಗವು ರೋಷ ಉನ್ಮಾದದ ಶಿಖರವನ್ನು ಏರಿ ಜ್ವಾಲಾಮುಖಿ ಎನ್ನುವಂತೆ ಧುಮುಕುತ್ತಿತ್ತು!

ಹರಿತವಾದ ಮೊನೆಯ ಬಾಣಗಳ ಸಮೂಹ ಹಾಸು ಹೊಕ್ಕಾಗಿ ಸಂಚಲಿಸಿದವು. ಅದು ಮೃತ್ಯುವಿನ ಭೋಜನ ಸಮಯದ ಮುಖದ ಹಲ್ಲುಗಳ ಪಂಜರದಂತೆ ನಿಗ್ರಹಿಸಲು ಸಾಧ್ಯವಿಲ್ಲದ, ಸಹಿಸಲಾಗದ ಉಗ್ರತೆಯಿಂದ ಕೂಡಿತ್ತು. ಕಣ್ಣಿನದೃಷ್ಟಿ ಹರಿಯುವವರೆಗೂ ಹರಡಿ ಹಬ್ಬಿಕೊಂಡಿದ್ದ ರುದ್ರ ರಣರಂಗದಲ್ಲಿ ಚಿತ್ರೆ ನುಗ್ಗಿ ನಡೆದಳು. ಬಿಳಿಯ ಬಾವುಟ ಹಿಡಿದು, ತುತ್ತುರಿಯ ದನಿಮಾಡುತ್ತ, ಶಾಂತಿಯನ್ನು ತೋರುತ್ತ, ಸಂಧಿಯನ್ನು ನಿರಂತರವಾಗಿ ಸಾರುತ್ತಿದ್ದಳು!

ಬಾಣಗಳ ಹರಿತವಾದ ಅಂಚು ಕುದುರೆಯನ್ನು ಮತ್ತು ರಾಣಿಯನ್ನು ಚುಚ್ಚಿದವು. ಅಶ್ವದ ಬಿಳಿ ಮೈ ಕೆಂಪಾಯಿತು. ಸಾಧ್ವಿಯ ಬಿಳಿಯ ಉಡುಪು ರಕ್ತರಂಗಾಗಿ, ಆ ರಕ್ತವು ಅವಳ ಧವಳ ಪತಾಕೆಗೂ ಚಿಮ್ಮಿತು. ಯುದ್ಧ ಶಬ್ದದ ಮಧ್ಯೆ, ಪಂಜುಗಳು ಉರಿಯುವ ಕಾಂತಿ ಕತ್ತಲಲ್ಲಿ ಕಣ್ಮಾಯೆಯಾಗಿಸುವ ಆ ಗಲಿಬಿಲಿಯ ಹೋರಾಟದ ಮಿಥ್ಯೆಯ ಹುಚ್ಚಿನಲ್ಲಿ – ಮೊದಲು ಯಾರೂ ಆ ಕುದುರೆಯನ್ನು, ಅದರ ಮೇಲಿದ್ದ ಶಾಂತಿ ಪತಾಕೆಯನ್ನು, ಅದನ್ನು ಹಿಡಿದು ತುತ್ತುರಿ ಊದುತ್ತಿದ್ದವಳನ್ನು ಲೆಕ್ಕಿಸಲಿಲ್ಲ.

ಆದರೇನು, ಒಂದಿಷ್ಟು ಹೊತ್ತಿನಲ್ಲಿ ಕೆಲವು ಸೈನಿಕರು ತೂರ್ಯವನ್ನು ಕೇಳಿ, ಅದರೊಡನೆ ಆ ಧ್ವಜವನ್ನು ಕಂಡರು. ವೈರಿಯ ಕುಹಕವೇನು? ಅಲ್ಲಲ್ಲ! ಅದೊ ನೋಡು! ಶುಭ ದೇವತಾಮೂರ್ತಿ, ಬಭ್ರುವಾಹನನ ಜನನಿ, ವೀರ ವೀರರ ವೀರಮಾತೆ! ತಕ್ಷಣ ಹೋ ಹೋ ಎಂದು ಗುಲ್ಲೆದ್ದಿತು! ಅದೊ, ನೋಡು ಭಟರಲ್ಲಿ ಕೆಲವರು ಅವಳ ಸಹಾಯಕ್ಕೆ ನುಗ್ಗುತ್ತಿರುವರು!

ಚಿತ್ರಾಂಗಿಯು ತನಗಾದ ಬಾಣದ ಏಟುಗಳನ್ನು ಲೆಕ್ಕಿಸದೆ, ಬಭ್ರುವಾಹನನ ರಥದ ಬಾವುಟವನ್ನು ಹುಡುಕುತ್ತ, ಧಾವಿಸುತ್ತಿದ್ದಳು. ಆಗ ಮುಂದೆ ದೂರದಲ್ಲಿ ಸಮರ ಭೈರವ ಭೀಷ್ಮ ಲೀಲೆಯಲ್ಲಿ ತೊಡಗಿದ್ದ ತಂದೆ ಮಕ್ಕಳ ಕಾಳಗದ ಆವೇಶ ರಾಹು ಕಂಡಿತು! ಅವರ ನೆತ್ತಿಯ ಎಡೆಯಲ್ಲಿ ರಣಚಂಡಿಯೊಡಗೂಡಿ, ರಕ್ತದಾಹದ ಆತುರದಿಂದ ಕುಣಿಯುತ್ತಿರುವ ಮೃತ್ಯು ಕಾಣಿಸಿತು!

## 'ಹೇ ಮೃತ್ಯುವೇ, ನನ್ನನ್ನು ತೆಗೆದುಕೊ, ಕೊಳ್ಳೆನ್ನ! ನನ್ನ ಪತಿ ಮತ್ತು ಮಗನನ್ನು ಕಾಪಾಡು!'

ಎಂದು ಆ ರಾಣಿಯು ಹೇಳುತ್ತ ಬಾವುಟದೊಡನೆ ತೂರ್ಯದ ಮಹಾಧ್ವನಿ ಹೊರಹೊಮ್ಮಿಸುತ್ತ, ರಣರಂಗಕ್ಕೆಲ್ಲ ಕೇಳಿಸುವಂತೆ ಮೇರೆಮೀರಿ ಕೂಗುತ್ತ, ಕುದುರೆಯಿಂದ ಕೆಳಕ್ಕೆ ಧುಮುಕಿದಳು.

'ಹಾ! ಹಾ! ಮಗನೆ! ಹಾ ಮಗನೆ! ಕೈಯ ತಡೆ! ಕೈಯ ತಡೆ! ದಮ್ಮಯ್ಯ ದಮ್ಮಯ್ಯ!' ಎಂದು ಹೇಳಿ, ಗಟ್ಟಿಯಾಗಿ ಕೂಗುತ್ತ, ಆಯಾಸಗೊಂಡು ದೊಪ್ಪೆಂದು – ಸೇತುವೆ ಎನ್ನುವಂತೆ ಪಿಣಿಲು ಹೆಣೆದ ಬಾಣದ ರಕ್ತಮಯ ಶಯ್ಯೆಯಲ್ಲಿ, ಆ ತಂದೆ ಮಕ್ಕಳ ನಡುವೆ ಬಿದ್ದಳು!

ಬಭ್ರುವಾಹನ ಮತ್ತು ಅರ್ಜುನ ಇಬ್ಬರೂ 'ಹಾ' ಎಂದು ಹೇಳುತ್ತ, ತಮ್ಮ ತಮ್ಮ ತೇರುಗಳಿಂದ ಧುಮುಕಿದರು! ನಾರಿ ಬಿದ್ದ ಕಡೆಗೆ ನಡೆದು ಓಡಿದರು. ಹತ್ತಿರದಲ್ಲಿಯೆ ಬಾಣಗಳಿಂದ ತುಂಬಿದ ಬಾವುಟವಿದೆ! ಮೈಗಾಯಗಳಿಂದ ಮುಖದಿಂದ ರಕ್ತ ಪ್ರವಾಹದಂತೆ ಹರಿಯುತ್ತಿದೆ! ಅವಳುಟ್ಟ ಬಟ್ಟೆ ತೊಪ್ಪನೆ ತೊಯ್ದು ಸೋರುತ್ತಿದೆ!

ಮೈಮರೆತು ಬಿದ್ದಿದ್ದ ತಾಯಿ ಚಿತ್ರಾಂಗದೆಯನ್ನು ನೋಡಿದೊಡನೆ ಮಗನು 'ಹಾ' ಎಂದು ಹೇಳುತ್ತ ಕಾಲಿಗೆ ಎರಗಿ ಅಳತೊಡಗಿದನು. ಅರ್ಜುನನು ತನ್ನ ಸೆರಗಿನಿಂದ ಗಾಳಿಯನ್ನು ಬೀಸಿ, ನೀರನ್ನು ತರಿಸಿ ನೀಡಿ ಶುಶ್ರೂಷೆ ಮಾಡಿದನು.

ಕಣ್ಣು ತೆರೆಯುತ್ತ ಆ ಚಿತ್ರೆಯು ತನ್ನ ಮಗನನ್ನು, ಪಕ್ಕದಲ್ಲಿಯೆ ಖಿನ್ನಮುಖಿಯಾಗಿದ್ದ ಪತಿದೇವನನ್ನು ನೋಡಿದಳು. ಕರುಣೆ ದುಃಖ ಹರ್ಷದ ಪ್ರೀತಿಯಿಂದ ನೋಡಿ, ಮತ್ತೆ ಮತ್ತೆ ನೋಡಿ ನಿಟ್ಟುಸಿರು ಬಿಡುತ್ತ ಹೀಗೆ ಹೇಳಿದಳು:

'ಮಗನೆ, ದುಗುಡವೇತಕ್ಕೆ? ಇದು ಸಂತೋಷ ಪಡಬೇಕಾದ ಸಮಯ! ನಾನು ಸಾಯುವೆನು, ಆದರೇನು? ಮಂಗಳ ಮುಹೂರ್ತಕ್ಕೆ ನಾನು ಇಲ್ಲಿಗೆ ಬಂದೆನು. ಇಲ್ಲದಿದ್ದರೆ ನೀನು ಈ ನಿನ್ನ ತಂದೆಯನ್ನು ಕೊಲ್ಲುತ್ತಿದ್ದೆ! ಮಹಾ ಪಾತಕಕ್ಕೆ ಗುರಿಯಾಗುತ್ತಿದ್ದೆ. ನಾನು ಇದುವರೆಗೆ ನಿನಗೆ ಹೇಳದ ಒಂದು ರಹಸ್ಯ ಇಂದು ಹೇಳುವೆನು ಕೇಳು. ನರನೆ, ನೀನೂ ಅದೇ ರೀತಿ ಕೇಳು. ನೀನು ನನ್ನ ಹೃದಯೇಶನಾದ ನನ್ನ ಪತಿ! ಗಾಬರಿಗೊಳ್ಳದಿರು, ಬೆರಗಾಗದಿರು, ಸಾಹಸದ ಕೆಚ್ಚುನುಡಿ ಎಂದು ಹೇಳದಿರು.'

## ಶಾಂತಾತ್ಮದಿಂ ಶಿವನಾಮವಂ ಸ್ಮರಿಸಿ ಕಣ್ಣು ಮುಚ್ಚಿದಳಮೃತಮಯ ಚಿರಸಮಾಧಿಯಲಿ!

ಚಿತ್ರೆಯು ತನ್ನ ಕಥೆಯನ್ನು ಪ್ರಾರಂಭದಿಂದ ಅತಿ ಸಂಕ್ಷೇಪವಾಗಿ ಹೇಳಿದಳು. ಅರ್ಜುನನ ನಾಮಾಂಕಿತದ ಮುದ್ರೆಯ ಶ್ರೀಉಂಗುರವನ್ನು ಅವನ ಕೈಗೆ ಸಾಕ್ಷಿಯಾಗಿ ನೀಡಿದಳು. ಒಂದು ಕೈಯಲ್ಲಿ ಮಗನನ್ನು, ಮತ್ತೊಂದರಲ್ಲಿ ಪತಿಯ ಕೈಯನ್ನು ಹಿಡಿದು ಸಂಧಿಯನ್ನು ಮಾಡಿದಳು. ಶಾಂತಿಯ ನುಡಿ ಹೇಳಿದಳು. ಶಾಂತಾತ್ಮದಿಂದ ಶಿವನಾಮವನ್ನು ಸ್ಮರಿಸುತ್ತ ಅಮೃತಮಯ ಚಿರಸಮಾಧಿಯಲ್ಲಿ ಕಣ್ಮುಚ್ಚಿದಳು! ಅತಿಯಾದ ದುಃಖ ಎತ್ತೆತ್ತಲೂ ತೇಲಾಡಿತು. ಕಂಬನಿ ಮಳೆ ಕರೆಯುವ ತೀರ್ಥದಲ್ಲಿ ಯುದ್ಧ ನಿಂತಿತು!

ಆ ವಿಷಮ ವಿಷಮಯ ರಾತ್ರಿ ಕಳೆಯಿತು. ಮರುದಿನ ಮೂಡಿತು. ಮೋಡ ಕವಿದು ಸೋನೆ ಮಳೆ ಸೂಸಿ ಜಗತ್ತು ಮೌನದಲ್ಲಿ ಖಿನ್ನವಾಗಿತ್ತು. ಧರೆ ಬಿರಿಯುವಂತ ಶೋಕ ಭೇರೀರವ, ಕಹಳೆ ನಿಸ್ಸಾಳ ಸಮೂಹ ಹೊಮ್ಮಿಸಿದ ನಡುಗಿಸುವ ಸದ್ದಿಗೆ ಮಣಿಪುರ ಇದ್ದಕ್ಕಿದ್ದಂತೆ ಬೆಚ್ಚಿಬಿದ್ದಿತು! ಅದು ಮೃದುವಾದ ಸುಸ್ವನದೊಡನೆ ವೈದಿಕ ಪುರೋಹಿತರ ಮಂತ್ರಘೋಷಗಳೊಡಗೂಡಿ ನಿಧಾನ ನಿಧಾನವಾಗಿ ಜನರ ರೋದನದ ಜೊತೆಗೆ ಎಚ್ಚರಗೊಂಡಿತು.

ಮಸಣಯಾತ್ರೆ ಮಣಿಪುರದ ಅರಮನೆಯ ಕೋಟೆಯ ಚಿನ್ನದ ಹೆಬ್ಬಾಗಿಲಿನಿಂದ ಹೊರನಡೆದು ಸಮುದ್ರದ ವಿಸ್ತೃತ ಹೊಂಬಣ್ಣದ ಮರಳು ದಂಡೆಯ ಕಡೆಗೆ ನಡೆಯಿತು. ಆನೆಗಳ ಪಂಕ್ತಿ, ಕುದುರೆಗಳ ಸಾಲು, ಕಾಲಾಳುಗಳ ಸಾಲು, ರಥ ಸಮೂಹಗಳು ದೃಷ್ಟಿ ಹರಿಯುವಷ್ಟು ದೂರ ನದಿಯಂತೆ ಹರಿದಿತ್ತು. ಅದರ ಜೊತೆಗೆ ನಾಗರಿಕ ನರನಾರಿಯರ ದಳದ ಮೆರವಣಿಗೆ ದುಃಖ ಭಾರದಿಂದ ಮಂದವಾಗಿ ಕಡಲತಡಿಯ ಕಡೆಗೆ ಸಾಗಿತು.

ಚಾಮರ ಛತ್ರಗಳ ಮಧ್ಯೆ ಪುಷ್ಪಗಳ